ಭೂ ನ್ಯಾಯ ಮಂಡಳಿ ಅಧಿಕಾರ ಮತ್ತು ಕರ್ತವ್ಯಗಳು

963(2014); ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು)

ಅ) ತಾಲ್ಲೂಕು ಭೂ ನ್ಯಾಯ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರುಗಳ ಅಧಿಕಾರ ಮತ್ತು ಕರ್ತವ್ಯಗಳೇನು;

ಆ) ಸರ್ಕಾರದಿಂದ ನಾಮ ನಿರ್ದೇಶನಗೊಂಡು ನೇಮಕವಾದ ಸದಸ್ಯರುಗಳಿಗೆ ಅಧ್ಯಕ್ಷರು ಲಿಖಿತ ನೋಟಿಸು ನೀಡಲು ಅವಕಾಶವಿದೆಯೇ;

ಇ) ಮಂಡಳಿಯ ಸಭೆಯಲ್ಲಿ ಸದಸ್ಯರುಗಳ ಪಾತ್ರವೇನು?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) ಕರ್ನಾಟಕ ಭೂ ಸುಧಾರಣೆ ಕಾಯ್ದೆ, ಸೆಕ್ಷನ್ 48ರ ಪ್ರಕಾರ ಸರ್ಕಾರವು ಭೂ ನ್ಯಾಯ ಮಂಡಳಿಯನ್ನು ರಚಿಸುತ್ತದೆ. ಭೂ ನ್ಯಾಯ ಮಂಡಳಿಗೆ ಆ ತಾಲ್ಲೂಕಿನ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿದ ಉಪ ವಿಭಾಗದ ಉಪ ವಿಭಾಗಾಧಿಕಾರಿ ಅಥವಾ ರಾಜ್ಯ ಸರ್ಕಾರವು ಆ ಉದ್ದೇಶಕ್ಕಾಗಿ ವಿಶೇಷವಾಗಿ ನೇಮಕ ಮಾಡಿದ ಒಬ್ಬ ಉಪ ವಿಭಾಗಾಧಿಕಾರಿ, ಭೂ ನ್ಯಾಯ ಮಂಡಳಿಯ ಅಧ್ಯಕ್ಷರಾಗಿ ಸರ್ಕಾರದ ನಾಮ ನಿರ್ದೇಶನ ಮಾಡಿದ 4 ಜನರು ಭೂ ನ್ಯಾಯ ಮಂಡಳಿಯ ಸದಸ್ಯರಾಗಿ ನ್ಯಾಯಾಧೀಕರಣ ರೂಪುಗೊಳ್ಳುತ್ತದೆ. ನ್ಯಾಯಾಧೀಕರಣವು ಕರ್ನಾಟಕ ಭೂ ಸುಧಾರಣೆ ಕಾಯ್ದೆ, ಸೆಕ್ಷನ್ 38, 48ಎ ಹಾಗೂ 66 ರೀತ್ಯಾ ಸ್ವೀಕೃತಗೊಂಡಿರುವ ಅರ್ಜಿಗಳನ್ನು ನೋಟೀಸು ನೀಡಿ ಭೂ ಕಂದಾಯ ಕಾಯ್ದೆ ಕಲಂ 34ರಲ್ಲಿ ನಿರ್ದಿಷ್ಟಪಡಿಸಿದಂತೆ ನ್ಯಾಯಾಧಿಕರದ ತನಿಖೆ ನಡೆಸಿ, ಆದೇಶ ಮಾಡಬೇಕೆಂದಿರುತ್ತದೆ. ಭೂ ನ್ಯಾಯ ಮಂಡಳಿ ಆದೇಶಕ್ಕೆ ಭೂ ನ್ಯಾಯ ಮಂಡಳಿ ಅಧ್ಯಕ್ಷರ ಜೊತೆಗೆ ವ್ಯಾಜ್ಯವನ್ನು ವಿಚಾರಣೆ ಮಾಡಿದ ನ್ಯಾಯಾಧೀಕರಣದ ಇತರ ಸದಸ್ಯರು ಆದೇಶಕ್ಕೆ ಸಹಿ ಮಾಡಬೇಕೆಂದಿರುತ್ತದೆ. ಭೂ ಸುಧಾರಣಾ

ಕಾಯ್ದೆಯಲ್ಲಿ ವಿಶಿಷ್ಟವಾಗಿ ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ಪ್ರತ್ಯೇಕ ಅಧಿಕಾರ ಮತ್ತು ಕಾರ್ಯ ವ್ಯಾಪ್ತಿಗಳನ್ನು ನಿಗಧಿಪಡಿಸಿರುವುದಿಲ್ಲ.

ಆ) ಸರ್ಕಾರದಿಂದ ನಾಮ ನಿರ್ದೇಶನಗೊಂಡು ನೇಮಕವಾದ ಸದಸ್ಯರುಗಳಿಗೆ ಅಧ್ಯಕ್ಷರು ಲಿಖಿತ ನೋಟಿಸು ನೀಡಲು ಅವಕಾಶವಿರುವುದಿಲ್ಲ. ಭೂ ನ್ಯಾಯ ಮಂಡಳಿಯ ಕಾರ್ಯದರ್ಶಿಗಳು ಮಾತ್ರ ಸಾಮಾನ್ಯವಾಗಿ ನೋಟಿಸ್ ನೀಡುತ್ತಾರೆ.

ಇ) ಭು ಸುಧಾರಣಾ ಕಾಯ್ದೆಯಲ್ಲಿ ವಿಶಿಷ್ಟವಾಗಿ ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ಪ್ರತ್ಯೇಕ ಅಧಿಕಾರ ಮತ್ತು ಕಾರ್ಯ ವ್ಯಾಪ್ತಿಗಳನ್ನು ನಿಗಧಿಪಡಿಸಿರುವುದಿಲ್ಲ. ಈಗಾಗಲೇ ಮೇಲಿನ ಅಂಶ (ಅ)ರಲ್ಲಿ ವಿವರಿಸಿರುವ ಪ್ರಕ್ರಿಯೆಯಲ್ಲಿ ಸದಸ್ಯರು ಸಹ ಭಾಗವಹಿಸುತ್ತಾರೆ.

**ಸಹಾಯಕ ನಿರ್ದೇಶಕರ ಹುದ್ದೆಗಳ ಮಾಹಿತಿ**

**964(2015); ಶ್ರೀ ಗೋಪಾಲ ಪೂಜಾರಿ .ಕೆ (ಬೈಂದೂರು)**

ಅ) ಕುಂದಾಪುರ ತಾಲ್ಲೂಕು ವ್ಯಾಪ್ತಿಯ ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕರ ಕಛೇರಿಗೆ ಮಂಜೂರಾದ ಹುದ್ದೆಗಳೆಷ್ಟು;

ಆ) ಆ ಪೈಕಿ ಭರ್ತಿಯಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳೆಷ್ಟು;

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

**ಶ್ರೀ ಕೆ. ಅಭಯಚಂದ್ರ (ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು)**

ಅ) ಕುಂದಾಪುರ ತಾಲ್ಲೂಕಿನ ಮೀನುಗಾರಿಕೆ ಇಲಾಖೆ ಕಛೇರಿಗೆ ಈ ಕೆಳಕಂಡಂತೆ ಹುದ್ದೆಗಳು ಮಂಜೂರಾಗಿರುತ್ತವೆ.

ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2) –01

ಮೀನುಗಾರಿಕೆ ಹಿರಿಯ ಮೇಲ್ವಿಚಾರಕರು –01